**ದಿಃ 12-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ ಶ್ರೀ. ಕೆ. ಎಲ್.ವಕೀಲರಿಂದ**

ವಾದಿ ರವರು ಈ ದಾವೆಯನ್ನು ಯಾವ ವಿಚಾರವಾಗಿ ಸಲ್ಲಿಸಿದ್ದಾರೆ ಎಂದು ತಿಳಿದಿದೆ. ವಾದಿ ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ಗೊತ್ತು. ಈ ದಾವೆಯಲ್ಲಿ ಪ್ರತಿವಾದಿಗಳ ವಿರುದ್ಧ ನ್ಯಾಯಾಲಯ ತಾತ್ಕಾಲಿಕ ನಿರ್ಬಂಧಿಕ ಕಾಜ್ಞೆ ಹೊರಡಿಸಿದೆ ಎಂದರೆ ಸರಿ. ಸದರಿ ಆದೇಶವನ್ನು ನಾವು ಪ್ರಶ್ನಿಸಿಲ್ಲ ಎಂದರೆ ಸರಿ. ವಾದಿಗೆ ಸಂಬಂಧಿಸಿದ ಕಂಪನಿ ಏನು ಕೆಲಸ ನಿರ್ವಹಿಸುತ್ತದೆ ಎಂದು ಗೊತ್ತಿಲ್ಲ. ವಾದಿಯ ಗಂಡ ಮಹೇಶಕುಮಾರ ಗೋತ್ತು. ವಾದಿಯ ಗಂಡ ನಮಗೆ ಸಂಬಂಧಿಸಿದಿ Impel Exports ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು 2011 ರಿಂದ 2017 ರ ವರೆಗ ಕೆಲಸದಲ್ಲಿ ಇದ್ದರು. ಸದರಿ ಮಹೇಶ ಕುಮಾರ ರವರ ಏನು ವಿದ್ಯಾಭ್ಯಾಸ ಮಾಡಿದ್ದರು ನನಗೆ ಗೊತ್ತಿಲ್ಲ. ಅವರನ್ನು ಕಂಪನಿಯಲ್ಲಿ Chief Officer ಹುದ್ದೇಗೆ ನಿಯೋಜಿಸಿದ್ದರು. ಅವರು Managing Director ನೇಮಕಾತಿಗೊಂಡಿದ್ದರು. Managing Director ಎಂದರೆ 1 ನೇ ಪ್ರತಿವಾದಿ. ಸದರಿ ಮಹೇಶಕುಮಾರ Chief Accountant ಆಗಿ ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆ ಪ್ರತಿವಾದಿಗಳು ಯಾವುದೇ ದಾಖಲೆಗಳು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಈ ಗ ನಾನು ಪ್ರತಿವಾದಿಯ ಪರ ಹಾಜರು ಪಡಿಸಿರುವ ದಾಖಲೆಗಳನ್ನು ನೋಡುತ್ತಿದ್ದು ಅದರಲ್ಲಿ ಮಹೇಶ ಕುಮಾರ ರವರ ನೇಮಕಾತಿ ಆದೇಶ ಇಲ್ಲ.

ಅದೇ ರೀತಿ ನಿ.ಡಿ. 1 ರಿಂದ 16 ರಲ್ಲಿ ಸದರಿ ಮಹೇಶಕುಮಾರ Chief Accountant ಆಗಿ ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆಯೂ ನಮೂದಾಗಿಲ್ಲ ಎಂದರೆ ಸರಿ. ನಮ್ಮ ಕಂಪನಿಯಲ್ಲಿ Account Officer ಆಗಬೇಕಾದರೆ ಏನು ವಿದ್ಯಾರ್ಹತೆ ಇರಬೇಕು ಎಂದರೆ ಸಾಕ್ಷಿ ಅವರ Diploma ಹಾಗೂ ಅವರ Experience ನೋಡಿ ತೆಗೆದುಕೊಳ್ಳುವುದು ಎನ್ನುತ್ತಾರೆ. ನಾವು Qualification ಇಲ್ಲದಿದ್ದರು Account Officer ಆಗಿ ನೇಮಕ ಮಾಡಿಕೊಳ್ಳುವುದಾ ಎಂದರೆ ಅದು ಸಂದರ್ಭಕ್ಕೆ ಅನುಸಾರವಾಗಿ ಇರುತ್ತದೆ ಎನ್ನುತ್ತಾರೆ. ಮಹೇಶಕುಮಾರ ನಮಗೆ ಸಂಬಂಧಿಸಿದ ಕಂಪಯಲ್ಲಿ ಯಾವತ್ತು ಸಹ Account Officer ಅಥವಾ Chief Account Officer ಆಗಿ ಆಗಿರಲಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಾವು ಮಹೇಶ ಕುಮಾರ ರವರಿಗೆ ಸಂಬಂಧಪಟ್ಟ ನೇಮಕಾತಿ ಆದೇಶ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮಹೇಶ ಕುಮಾರ ರವರು Diploma in Mechanical Engineering ಅರ್ಹತೆ ಹೊಂದಿದ್ದು ಅವರು ಯಾವತ್ತು Accounts Officer ಆಗಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ಅವರು Technical ವಿಭಾಗದ ಒಬ್ಬ Employee ಮಾತ್ರ ಆಗಿದದ್ದು ಎಂದರೆ ಸರಿಯಲ್ಲ.

ನಾನು ಸದರಿ ಕಂಪನಿಯಲ್ಲಿ 2014 ರಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಹುದ್ದೆ Group General Manager. ನನ್ನ ವಿದ್ಯಾರ್ಹತೆ B.Sc. B.E ಇರುತ್ತದೆ. ನಾನು 2014 ರಲ್ಲಿ ಕೆಲಸಕ್ಕೆ ಸೇರಿಕೊಂಡಾಗ ಸದರಿ ಮಹೇಶ ಕುಮಾರ Chief Accounts ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರು

ಯಾವ ವರ್ಷ Accounts Manager ಆಗಿ ಬಡ್ತಿ ಹೊಂದಿದ್ದರು ಗೊತ್ತಿಲ್ಲ. ನಮ್ಮ ಕಂಪನಿಯಲ್ಲಿ ಈಗ ಇಬ್ಬರು Accounts Officer ಇರುತ್ತಾರೆ. ಆ ಸಮಯದಲ್ಲೂ ಸಹ ಸದರಿ ಮಹೇಶ ಕುಮಾರ ಹಾಗೂ ಮತ್ತೋಬ್ಬರು Accounts Officer ಆಗಿದ್ದರು. ಸದರಿ ಮತ್ತೋಬ್ಬರು ಬಾಲರಾಜ. ಸದರಿ ಬಾಲರಾಜ ರವರನ್ನು ಯಾವ ರೀತಿ ನೇಮಕ ಮಾಡಿಕೊಂಡಿದ್ದರು ಎನ್ನುವ ಬಗ್ಗೆ Appointment Letter ಇದೆಯಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಈಗಲಾದರೂ ಸದರಿ ಮಹೇಶ ಕುಮಾರ ರವರು Accounts Officer or Chief Accounts Officer ಆಗಿದ್ದರು ಎನ್ನುವ ಬಗ್ಗೆ ದಾಖಲೆ ಹಾಜರು ಪಡಿಸಿಸಲು ತೊಂದರೆ ಇದೆಯಾ ಎಂದರೆ ಅದನ್ನು ಪರಿಶೀಲಿಸಬೇಕು ಎನ್ನುತ್ತಾರೆ.

ನಮ್ಮ Impel Exports ಕಂಪನಿ ಯವರು Sai Engineering Company ಯ ಜೊತೆ ಲೈನರ್ಸ್ ಖರೀದಿ ಮಾಡುವ ವ್ಯವಹಾರ ಹೊಂದಿದ್ದರು ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆಯ ಬಗ್ಗೆ ಹೇಳಬಹುದಾ ಎಂಂದರೆ ಅಂತಹ ಯಾವುದೇ ವ್ಯವಹಾರ, ಮಾರಾಟ ನಡೆದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತನಲ್ಲಿ ಝುರಾಸ್ಸ Invoice ಗಳನ್ನು ತೋರಿಸಿ ಪ್ರಶ್ನೆ ಕೇಳಲಾಗಿದೆ. 2011 ರಿಂದ 2017 ರ ನಡುವಿನ ಅವಧಿಯಲ್ಲಿ Sai Engineering Company ಹಾಗೂ Impel Exports ಕಂಪನಿಯ ನಡುವೆ ಮಾರಾಟ ಮಾಡುವ ಹಾಗೂ ಕೊಂಡುಕೊಳ್ಳು ವ್ಯವಹಾರ ನಡೆದಿದೆ ಎಂದರೆ ಸರಿಯಲ್ಲ.

ಈ ಸಂಧರ್ಬದಲ್ಲಿ  Sai Engineering Company ಗೆ ನಾವು Purchase Order ನೀಡಿದ್ದು ಅದರ ಪ್ರಕಾರ ಅವರು ಸರಕು ಓದಗಿಸಿದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧ ಎರಡು ಕಂಪನಿ ಸರರ್ಕಾರಕ್ಕೆ ಜಿ.ಎಸ್.ಟಿ ಸಹ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಎರಡು ಕಂಪನಿಯ ನಡುವೆ ವ್ಯವಹಾರ ನಡೆದಿದ್ದು ಸದರಿ ವಿಚಾರ ನನಗೆ ತಿಳಿದಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ. 9 ಕರಾರು ಆಗುವ ಸಂಧರ್ಬದಲ್ಲಿ ನಾನು ಇರಲಿಲ್ಲ ಎಂದರೆ ಸಾಕ್ಷಿ ಆ ಅವಧಿಯಲ್ಲಿ ನಾನು ಅದೇ ಕಂಪಯಲ್ಲಿ ಇದ್ದೆ ಹಾಗೂ ದಾಖಲೆಯ ಬಗ್ಗೆ ಮಾಹಿತಿ ಇದೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಮಹೇಶಕುಮಾರ ರವರು ಯಾವ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು ಎಂದು ನಮೂದಿಸಿಲ್ಲ ಎಂದರೆ ಆ ಸಂಧರ್ಬಕ್ಕೆ ಅದರ ಅವಶ್ಯಕತೆ ಇರಲಿಲ್ಲ ಹಾಗೂ ಅದು ಒಂದು ಕರಾರು ಮಾತ್ರ ಎನ್ನುತ್ತಾರೆ. ನಿ.ಡಿ. 9 ರಲ್ಲಿ Employee ID Number ನಮೂದಿಸಿಲ್ಲ ಎಂದರೆ ಸರಿ.  ಸಾಮಾನ್ಯವಾಗಿ ನಿ.ಡಿ. 9 ರ ರೀತಿಯ ಕರಾರನ್ನು Employeer Employee ನೇಮಕ ಮಾಡಿಕೊಳ್ಳುವ ಅವಧಿಯಲ್ಲಿ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ನೇಮಕಾತಿ ಆದೇಶ ಹಾಜರು ಪಡಿಸಲು ತೊಂದರೆ ಇಲ್ಲ. ಮಹೇಶಕುಮಾರ  ಕೆಲಸ ಬಿಟ್ಟು ಹೊಗುವ ಅವಧಿಯಲ್ಲಿ ಸದರಿ ರೀತಿಯ Non compete agreement clause ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನಿ.ಡಿ. 9 ನ್ನು ಎಲ್ಲಿ ಮಾಡಿರುವುದು ಎಂದರೆ ನನಗೆ ಸ್ಥಳ ಗೊತ್ತಿಲ್ಲ ಎನ್ನುತ್ತಾರೆ.

ನಮ್ಮ ಕಂಪನಿ 2011 ರಿಂದಲೇ Sai Engineering Company ಯ ಜೊತೆ ವ್ಯವಹಾರ ಮಾಡುತ್ತಿದ್ದ ಕಾರಣ Non compete agreement ಮಾಡಿಕೊಳ್ಳು ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ. 9 ದಾಖಲೆಯನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ವಿಚಾರಣೆಯನ್ನು ಮುಂದೂಡಲಾಗಿದೆ.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**73 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು**
**ಬೆಂಗಳೂರು.**